# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006

ಸಂಖ್ಯೆ: ಕರಾಮುವಿ/ಆವಿ/ಜಿಎಲ್ -2/503/2018-19

ದಿನಾಂಕ:01.10.2018

## ಪ್ರಕಟಣೆ

ಉನ್ನತ ಶಿಕ್ಷಣದ ಕುರಿತು ಅರಿವು ಮತ್ತು ಮಹತ್ವ ತಿಳಿಸುವ ಸಂಬಂಧದಲ್ಲಿ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ವತಿಯಿಂದ ಕರ್ನಾಟಕ ರಾಜ್ಯದ ವಿಶ್ವವಿದ್ಯಾನಿಲಯಗಳ ಶೈಕ್ಷಣಿಕ ಸಾಧನೆಗಳನ್ನು ಛಾಯಾಚಿತ್ರಗಳು ಮತ್ತು ಕಿರುಚಿತ್ರಣದ ಮೂಲಕ ತಿಳಿಸುವ ಉದ್ದೇಶದಿಂದ ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪ್ರತ್ಯೇಕ ಕೌಂಟರ್‌ಅನ್ನು ತೆರೆಯಲಾಗುತ್ತಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಧ್ಯೇಯೋದ್ದೇಶಗಳನ್ನು ಮತ್ತು ಅದು ನೀಡುತ್ತಿರುವ ಶೈಕ್ಷಣಿಕ ಸೇವೆಗಳ ಕುರಿತು ಅತ್ಯಾಧುನಿಕ ಛಾಯಾಗ್ರಾಹಕ ಯಂತ್ರಗಳನ್ನು ಬಳಸಿ ಫುಲ್ ಹೆಚ್‌ಡಿ ರೆಸೆಲ್ಯೂಷನ್‌ನಲ್ಲಿ ನಕಲು ಮಾಡಲಾಗದ ತಾಂತ್ರಿಕತೆಯೊಂದಿಗೆ 20 ನಿಮಿಷಗಳ ಕಿರುಚಿತ್ರಣವನ್ನೊಳಗೊಂಡ ಡಾಕ್ಯುಮೆಂಟರಿಯನ್ನು ಸಿದ್ಧಪಡಿಸಬೇಕಿದ್ದು ಅದಕ್ಕಾಗಿ ಅರ್ಹ ಸಂಸ್ಥೆಗಳು / ವ್ಯಕ್ತಿಗಳಿಂದ ದರಪಟ್ಟಿಯನ್ನು ಕರೆಯಲಾಗಿದೆ.

ಡಾಕ್ಯುಮೆಂಟರಿಗೆ ಬಳಸಬಹುದಾದ ತಾಂತ್ರಿಕತೆಯ ವಿವರಗಳನ್ನೊಳಗೊಂಡಂತೆ ದರಪಟ್ಟಿಯನ್ನು "ವಿಶ್ವವಿದ್ಯಾನಿಲಯದ ಡಾಕ್ಯುಮೆಂಟರಿಗೆ ದರಪಟ್ಟಿ" ಎಂದು ಲಕೋಟೆಯ ಮೇಲೆ ನಮೂದಿಸಿ ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು – 570 006 ಇವರಿಗೆ ದಿನಾಂಕ:05.10.2018ರೊಳಗಾಗಿ ಸಲ್ಲಿಸುವುದು.

ಹೆಚ್ಚಿನ ಮಾಹಿತಿಗೆ ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಇವರನ್ನು ಸಂಪರ್ಕಿಸುವುದು.

ಆದೇಶದ ಮೇರೆಗೆ

1/10

ಕುಲಸಚಿವರು